**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಸತ್ರ ಪ್ರಕರಣ ಸಂಖ್ಯೆಃ 46/2023</u>**

ದಿನಾಂಕಃ 16.01.2025
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಪ. -11 ಅ.ಸಾ -10

| | | |
|---|---|---|
| ಹೆಸರು | ಃ | ಶ್ರೀ. ದೇವರಾಜು |
| ತಂದೆಯ ಹೆಸರು | ಃ | ಲೇಟ್ ಚನ್ನೇಗೌಡ |
| ವಯಸ್ಸು | ಃ | 34 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ನೇರಳೂರು |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನನಗೆ ಈ ಪ್ರಕರಣದ ಆರೋಪಿಗಳು ಮತ್ತು ಮೃತ ಶಿವು ಗೊತ್ತಿಲ್ಲ. ದೋ.ಪ.ಸಾಕ್ಷಿ-12 ನನಗೆ ಗೊತ್ತಿಲ್ಲ. ನಾನು ಯಾವತ್ತು ರಾತ್ರಿ ಸಮಯದಲ್ಲಿ ಮೋಟಾರ್ ಸೈಕಲ್ ನಲ್ಲಿ ಎಲ್ಲಿಯೂ ಹೋಗಿರುವುದಿಲ್ಲ. ಈ ಪ್ರಕರಣ ಕುರಿತು ಏನು ನನಗೆ ಗೊತ್ತಿಲ್ಲ. ಪೋಲಿಸರ ಮುಂದೆ ನಾನು ಯಾವುದೇ ಘಟನೆ ಕಣ್ಣಾರೆ ನೋಡಿರುವ ಕುರಿತು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಅಭಿಯೋಜಕರು ಕೋರಿರುತ್ತಾರೆ. ವಾದ ಆಲಿಸಿರುತ್ತದೆ. ಪ್ರಕರಣದ ಕಡತವನ್ನು ಪರಿಶೀಲಿಸಿದ್ದು ಸಾಕ್ಷಿ ತನ್ನ ದಿನಾಂಕ 30.10.2022 ರ ಹೇಳಿಕೆ ಪ್ರಕಾರ ಸಾಕ್ಷ್ಯ ಹೇಳದೇ ಇರುವುದು ಕಂಡುಬಂದಿದ್ದು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 28.10.2022 ರ ರಾತ್ರಿ 11.30 ರ ಸುಮಾರಿಗೆ ನಾನು ಮತ್ತು ದೋ.ಪ.ಸಾಕ್ಷಿ-10 ತಿಪ್ಪೂರು ಗ್ರಾಮಕ್ಕೆ ಹೋಗಲು ಮನೆಯ ಬಳಿ ಮೋಟಾರ್ ಸೈಕಲ್ ನಿಲ್ಲಿಸಿಕೊಂಡು ಮಾತಾನಾಡುತ್ತಿದ್ದೇವು ಎನ್ನುವುದು ಸರಿ ಅಲ್ಲ. ಆ ಸಮಯಕ್ಕೆ ಆರೋಪಿ-1 ಒಂದು ಮೋಟಾರ್ ಸೈಕಲ್ ನಲ್ಲಿ, ಆರೋಪಿ-2 ಮತ್ತು 3 ಇನ್ನೊಂದು ಮೋಟಾರ್ ಸೈಕಲ್ ನಲ್ಲಿ ಮದ್ಯ ಶಿವು ಕೂರಿಸಿಕೊಂಡು ಬರುತ್ತಿದ್ದರು ಎನ್ನುವುದು ಸರಿ ಅಲ್ಲ. ಆರೋಪಿ-1 ರವರನ್ನು ಕೇಳಿದಾಗ ಇಗ್ಗಲೂರು ಕಡೆಗೆ ಸ್ವಲ್ಪ ಕೆಲಸ ಇದೆ ಎಂದು ಹೇಳಿದ್ದು ಇನ್ನೊಂದು ಮೋಟಾರ್ ಸೈಕಲ್ ನಲ್ಲಿ ಇರುವವರು ತನ್ನ ಭಾವ ಮೈದುನ ಮತ್ತು ಆತನ ಸ್ನೇಹಿತ ಮತ್ತು ಮದ್ಯ ಇರುವವನು ಶಿವು ಎಂದು ಹೇಳಿದರು ಎನ್ನುವುದು ಸರಿ ಅಲ್ಲ. ಆಗ ಶಿವು ಮೈ ಮೇಲೆ ಕೇವಲ ಪ್ಯಾಂಟ್ ಇದ್ದು ಹಿಂದೆ ಕುಳಿತಿದ್ದ ಆರೋಪಿ-3 ಶಿವುವನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದರು ಎನ್ನುವುದು ಸರಿ ಅಲ್ಲ. ನನಗೆ 2021 ರಲ್ಲಿ ಶಿವು ಆರೋಪಿ-1 ರವರ ಮಗಳಿಗೆ ಲೈಂಗಿಕ ಶೋಷಣೆ ಮಾಡಿದ್ದ ವಿಚಾರ ಗೊತ್ತಿತ್ತು ಎನ್ನುವುದು ಸರಿ ಅಲ್ಲ.

ನಂತರ ದಿನಾಂಕ 29.10.2022 ರ ಬೆಳಿಗ್ಗೆ 6.30 ಕ್ಕೆ ಊರಿನ ಜನ ತಮ್ಮಣ್ಣನ ಜಮೀನಿನ ಬಳಿ ಶಿವು ಕೊಲೆ ಮಾಡಿರುವುದಾಗಿ ಮಾತಾನಾಡುತ್ತಿದ್ದು ನಾನು ಸಹ ಅಲ್ಲಿಗೆ ಹೋಗಿ ಹೆಣ ನೋಡಿರುತ್ತೇನೆ ಎನ್ನುವುದು ಸರಿ ಅಲ್ಲ. ದಿನಾಂಕ 30.10.2022 ರಂದು ತನಿಖೆಗಾಗಿ ತನಿಖಾಧಿಕಾರಿಯವರು ಬಂದಿದ್ದಾಗ ಆರೋಪಿ-1 ತನ್ನ ಮಗಳಿಗೆ ಶಿವು

ಲೈಂಗಿಕ ಶೋಷಣೆ ಮಾಡಿದ ವಿಚಾರದಲ್ಲಿ ದ್ವೇಷ ಸಾಧಿಸಿ ಕೊಲೆ ಮಾಡಿರುತ್ತಾರೆಂದು ತಿಳಿಯಿತು ಎನ್ನುವುದು ಸರಿ ಅಲ್ಲ. ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುವುದರಿಂದ ಅವರುಗಳಿಗೆ ಶಿಕ್ಷೆ ಆಗುವುದನ್ನು ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

ದಿನಾಂಕ 30.10.2022 ರಂದು ಮೇಲೆ ಸೂಚಿಸಿದಂತೆ ನಡೆದಿರುವುದರ ಕುರಿತು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿ ಅಲ್ಲ. ಹೇಳಿಕೆಯನ್ನು **ನಿಪಿ-17** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.